# ಎರಡು ಶೇಡ್‌ಗಳಲ್ಲಿ ಗಣೇಶ್



‘ಕೃಷ್ಣಂ ಪ್ರಣಯ ಸಖಿ’ ನಂತರ ನಟ ಗಣೇಶ್ ‘ಪಿನಾಕ’ ಎಂಬ ಚಿತ್ರದಲ್ಲಿ ನಟಿಸುತ್ತಿದ್ದು, ಸಿನಿಮಾದಲ್ಲಿ ಎರಡು ಶೇಡ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ.

‘ಕ್ಷುದ್ರ’ ಹಾಗೂ ‘ರುದ್ರ’ ಎಂಬ ಎರಡು ಪಾತ್ರಗಳಲ್ಲಿ ಗಣೇಶ್ ಕಾಣಿಸಿಕೊಳ್ಳುತ್ತಿದ್ದಾರೆ. ಎರಡು ಶೇಡ್‌ಗಳಲ್ಲಿ ಕಾಣಿಸಿಕೊಳ್ಳುತ್ತಿರುವುದರಿಂದ ಹೆಚ್ಚುವರಿ ತಯಾರಿ ಹಾಗೂ ಅಭ್ಯಾಸವೂ ಸಾಗುತ್ತಿದೆ. ಶಿವರಾತ್ರಿಯಂದು ಚಿತ್ರತಂಡ ಹೊಸ ಪೋಸ್ಟರ್ ಬಿಡುಗಡೆ ಮಾಡಿದ್ದು, ತ್ರಿಶೂಲಧಾರಿ ಗೆಟಪ್‌ನಲ್ಲಿ ಗಣೇಶ್ ಕಾಣಿಸಿಕೊಂಡಿದ್ದಾರೆ.

‘ಯುವರ್ ಸಿನ್ಸಿಯರ್ಲಿ ರಾಮ್’ ಸಿನಿಮಾದಲ್ಲಿಯೂ ರಮೇಶ್ ಅರವಿಂದ್ ಜೊತೆ ಗಣೇಶ್ ನಟಿಸುತ್ತಿದ್ದಾರೆ. ಇದರೊಂದಿಗೆ ‘ಪಿನಾಕ’ ಸಿನಿಮಾ ಕೂಡ ಅವರ ಲಿಸ್ಟ್‌ನಲ್ಲಿದೆ. ತೆಲುಗು ನಟಿ ನಯನ್ ಸಾರಿಕಾ ಸಿನಿಮಾ ನಾಯಕಿಯಾಗಿ ಆಯ್ಕೆಯಾಗಿರುವುದಾಗಿ ತಿಳಿದುಬಂದಿದೆ. ರೊಮ್ಯಾಂಟಿಕ್ ಹೀರೊ ಗೆಟಪ್‌ಗಿಂತ ಭಿನ್ನವಾಗಿ ಈ ಪಾತ್ರ ಇರುವುದಾಗಿ ಗಣೇಶ್ ಹೇಳಿಕೊಂಡಿದ್ದಾರೆ.

ನೃತ್ಯ ನಿರ್ದೇಶಕರಾಗಿ ಗುರುತಿಸಿಕೊಂಡಿರುವ ಬಿ. ಧನಂಜಯ ಈ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳುತ್ತಿದ್ದಾರೆ. ‘ಪಿನಾಕ’ ಎಂದರೆ ಶಿವನ ತ್ರಿಶೂಲ. ಇದನ್ನೇ ಶೀರ್ಷಿಕೆಯನ್ನಾಗಿ ಇಡಲಾಗಿದ್ದು, ತೆಲುಗು, ಕನ್ನಡ ಸೇರಿದಂತೆ ಅನೇಕ ಭಾಷೆಗಳಲ್ಲಿ ಹಲವು ಚಿತ್ರಗಳನ್ನು ನಿರ್ಮಿಸಿರುವ ಟಿ.ಜಿ. ವಿಶ್ವಪ್ರಸಾದ್ ಸಾರಥ್ಯದ ಪೀಪಲ್ ಮೀಡಿಯಾ ಫ್ಯಾಕ್ಟರಿ ಈ ಸಿನಿಮಾ ನಿರ್ಮಾಣದಲ್ಲಿ ತೊಡಗಿಕೊಂಡಿದೆ.

# ಮತ್ತೆ ಶೂಟಿಂಗ್‌ನತ್ತ ಶಿವಣ್ಣ



ಈಚೆಗೆ ಅಮೆರಿಕದಿಂದ ಕ್ಯಾನ್ಸರ್ ಚಿಕಿತ್ಸೆ ಪಡೆದು ಗುಣಮುಖರಾಗಿ ಮರಳಿರುವ ನಟ ಶಿವರಾಜ್‌ಕುಮಾರ್, ಶೂಟಿಂಗ್‌ಗೆ ಹಾಜರಾಗಲು ಅಣಿಯಾಗಿದ್ದಾರೆ. ತೆಲುಗಿನ ಸ್ಪೋರ್ಟ್ಸ್ ಡ್ರಾಮಾ ಜಾನರ್‌ನ ಸಿನಿಮಾದಲ್ಲಿ ಶಿವರಾಜ್‌ಕುಮಾರ್ ಕೂಡ ನಟಿಸುತ್ತಿದ್ದು, ಹೈದರಾಬಾದ್‌ನಲ್ಲಿ ಚಿತ್ರೀಕರಣ ನಡೆಯಲಿದೆ. ಆ ಚಿತ್ರೀಕರಣಕ್ಕೆ ಶೀಘ್ರವೇ ಜೊತೆಯಾಗುವುದಾಗಿ ತಿಳಿಸಿದ್ದಾರೆ.

ತಮ್ಮ ಕ್ಯಾನ್ಸರ್ ಚಿಕಿತ್ಸೆ ಕುರಿತು ಮಾತನಾಡುತ್ತಾ, “ಮೊದಲು ನನ್ನಲ್ಲಿ ಕ್ಯಾನ್ಸರ್ ಪತ್ತೆಯಾದಾಗ ಆತಂಕ ಶುರುವಾಗಿತ್ತು. ಆದರೆ ನನ್ನ ಕುಟುಂಬ ಹಾಗೂ ವೈದ್ಯರು ನನ್ನಲ್ಲಿ ಆತ್ಮಸ್ಥೈರ್ಯ ತುಂಬಿದರು. ಕಿಮೋಥೆರಪಿ ಮಾಡಿಸಿಕೊಳ್ಳುತ್ತಿರುವಾಗಲೇ ‘45’ ಸಿನಿಮಾದ ಚಿತ್ರೀಕರಣದಲ್ಲಿ ತೊಡಗಿಕೊಂಡಿದ್ದೆ” ಎಂದು ಹೇಳಿಕೊಂಡಿದ್ದಾರೆ.

ಈಗ ಸಂಪೂರ್ಣ ಚೇತರಿಸಿಕೊಂಡಿದ್ದು, ಸೆಟ್‌ಗಳಿಗೆ ಮತ್ತೆ ಹಿಂದಿರುಗುವುದಾಗಿ ಹೇಳಿದ್ದಾರೆ. ಹೇಮಂತ ರಾವ್ ನಿರ್ದೇಶನದ ‘ಭೈರವನ ಕೊನೆ ಪಾಠ’ ಸಿನಿಮಾದಲ್ಲಿಯೂ ಶಿವರಾಜ್‌ಕುಮಾರ್ ನಟಿಸುತ್ತಿದ್ದಾರೆ. ‘ಆನಂದ್’, ‘ಘೋಸ್ಟ್ 2’ ಸಿನಿಮಾಗಳು ಕೂಡ ಸರದಿಯಲ್ಲಿವೆ.

# ‘ಪ್ರೀತಿಯ ಗಾಳಿ’ಯಲ್ಲಿ ತೇಲಿ...

‘ಇಮಾನ’, ‘ಬಿಡುಗಡೆ’, ‘ಹಬ್ಬ ಹರಿದಿನ ಸುಗ್ಗಿ ಶಿವರಾತ್ರಿ’, ‘ವಿದಾಯ’ – ಹೀಗೆ ನಾಲ್ಕೈದು ಕಿರುಚಿತ್ರಗಳನ್ನು ರೂಪಿಸಿರುವ ಯುವ ಪ್ರತಿಭೆ ನವೀನ್ ತೇಜಸ್ವಿ ಕನ್ನಡ ಇಂಡಿ ಫೋಕ್‌ಪಾಪ್ ಬ್ಯಾಲಡ್ ಶೈಲಿಯಲ್ಲಿ ಹಾಡನ್ನು ಹೊರತಂದಿದ್ದಾರೆ.

‘ಪ್ರೀತಿಯ ಗಾಳಿ’ ಎಂಬ ಹಾಡನ್ನು ಹೊರತಂದಿದ್ದು, ಇದರ ಸಂಗೀತ ಸಂಯೋಜನೆ ಹಾಗೂ ಗಾಯನ ನವೀನ್ ತೇಜಸ್ವಿ ಅವರದ್ದೇ ಆಗಿದೆ. ಜನಾರ್ದನ ಕೆಸರಗದ್ದೆ ಅವರು ಸಾಹಿತ್ಯ ನೀಡಿದ್ದಾರೆ.

‘ಪ್ರೀತಿಯ ಗಾಳಿ’ ಕನ್ನಡ ಇಂಡಿ ಫೋಕ್–ಪಾಪ್ ಬ್ಯಾಲಡ್ ಆಗಿದ್ದು, ಪ್ರೀತಿ, ಒಗ್ಗಟ್ಟು ಮತ್ತು ಸಾಮಾಜಿಕ ಬೇಲಿಗಳನ್ನು ಮೀರಿ ಮಾನವ ಸಂಬಂಧಗಳನ್ನು ಬೆಸೆಯುವ ಬಗೆಗಿನ ಸಾರವನ್ನು ಸೊಗಸಾಗಿ ಒಳಗೊಂಡಿದೆ. ಇದು ಜಾತಿ–ಧರ್ಮಗಳ ಮಧ್ಯೆ ಸೇತುವೆ ನಿರ್ಮಿಸುವ, ಸಾಮಾಜಿಕ ಬದಲಾವಣೆಯನ್ನು ಪ್ರೋತ್ಸಾಹಿಸುವ ಹಾಡಾಗಿದೆ. ಈ ಆಕೊಸ್ಟಿಕ್ ಗಿಟಾರ್ ಹಾಡು ಕಾವ್ಯಾತ್ಮಕ ಕನ್ನಡ ಸಾಹಿತ್ಯವನ್ನು ಮಧುರ ಮೆಲೊಡಿಯೊಂದಿಗೆ ಸೇರಿಸಿ ಭಾವನಾತ್ಮಕ ಸಂಗೀತ ಅನುಭವವನ್ನು ನೀಡುತ್ತದೆ’ ಎಂದು ಹಾಡಿನ ಬಗ್ಗೆ ನವೀನ್ ತೇಜಸ್ವಿ ಹೇಳಿದ್ದಾರೆ.

ಈ ಹಿಂದೆ ‘ರಾಕೆಟ್ರಿ’ ಸಿನಿಮಾ ಸೇರಿದಂತೆ ಹಲವು ಕನ್ನಡ ಹಾಡುಗಳಿಗೆ ಸಾಹಿತ್ಯ ರಚಿಸಿರುವ ಇವರ ಸಂಯೋಜನೆ, ಗಾಯನದಲ್ಲಿ ಮೂಡಿಬಂದಿರುವ ‘ಪ್ರೀತಿಯ ಗಾಳಿ’ ಹಾಡು ನೋಡಲು: https://shorturl.at/Tw3g2 ಗೆ ಕ್ಲಿಕ್ ಮಾಡಿ.

